ಶ್ರೀ ಸಿದ್ಧರಾಮಯ್ಯ : ಕಾಫಿ ಬೆಳೆಗಾರರ ಬಗ್ಗೆ ಮಾನ್ಯ ವಿಶ್ವನಾಥ್‌ರವರು ಪ್ರಸ್ತಾಪಿಸಿದ್ದಾರೆ ನಾನು ಅದನ್ನು, ಮುಖ್ಯಮಂತ್ರಿಗಳನ್ನು ಹಾಗೂ ನನ್ನನ್ನೂ ಕೂಡ ಬಂದು ಭೇಟಿ ಮಾಡಿದ್ದಾರೆ. ನಮ್ಮ ಮುಖ್ಯಮಂತ್ರಿಗಳ ಜೊತೆಗೆ ಮಾತನಾಡಿ ಅದನ್ನು ಪರಿಶೀಲನೆ ಮಾಡಿ ಅವರಿಗೆ ಏನು ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅದನ್ನು ಮಾಡುತ್ತೇನೆ. ಮತ್ತೆ ಕಬ್ಬು ಬೆಳೆಗಾರರದ್ದು ಇದೆಯಲ್ಲಾ. ಕಬ್ಬು ಬೆಳೆಗಾರರಿಗೆ ಸಂಬಂಧಪಟ್ಟಂತೆ ಎಲ್ಲರನ್ನೂ ಸಭೆ ಕರೆಯುತ್ತೇನೆ,.. ಕಬ್ಬಿನ ಬೆಲೆಗಳು ಹೆಚ್ಚಾಗಬೇಕು ಎಂದು ಹೇಳುತ್ತಿದ್ದಾರೆ, ಶುಗರ್‌ಕೇನ್‌ಗೆ ಹಾಗೂ ಶುಗರ್‌ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ಆ ಭಾಗದ ಎಲ್ಲಾ ಎಂಎಲ್‌ಎ ಹಾಗೂ ರೈತರನ್ನು ಅಧಿವೇಶನದ ಮುಗಿದ ನಂತರ ಒಂದು ಮೀಟಿಂಗ್ ಮಾಡಿ ಅದರ ಮೇಲೆ ತೀರ್ಮಾನ ಮಾಡುತ್ತೇವೆ ಎನ್ನುವ ಮಾತನ್ನೂ ಕೂಡ ತಿಳಿಸುತ್ತೇನೆ.

ಅಧ್ಯಕ್ಷರು : ಆಯಿತು. ಎಲ್ಲಾ ಕುಳಿತುಕೊಳ್ಳಿ. ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ, ನೀವು ಈ ರೀತಿ ಮಾಡಿದರೆ ಹೇಗೆ?

ಶ್ರೀ ಸಿದ್ಧರಾಮಯ್ಯ : ಡೀಸೆಲ್ ಮೇಲೆ ರಿಯಾಯಿತಿ ಕೊಡುವುದು, ಮೀನುಗಾರರು ಉಪಯೋಗಿಸುವಂಥ ಬೋಟ್‌ಗಳಿಗೆ, ಅದು 50 ಸಾವಿರ ರೂಪಾಯಿದವರೆಗೆ ಇದೆ, ಅದನ್ನು ಹೆಚ್ಚು ಮಾಡಬೇಕು ಎನ್ನುತ್ತಿದ್ದಾರೆ, ಇದು ಎಂಟು ತಿಂಗಳ ಬಜೆಟ್ ಆಗಿರುವುದರಿಂದ, ಮುಂದೆ ಅದನ್ನು ಹೆಚ್ಚು ಮಾಡಿಕೊಡುತ್ತೇನೆ ಎನ್ನುವ ಮಾತನ್ನು ಅವರಿಗೆ ಹೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜುಂಡಪ್ಪನವರ ವರದಿಯನ್ನಾಧರಿಸಿ...

ಶ್ರೀ ಸಿದ್ಧರಾಮಯ್ಯ : ಕನ್ನಡೇತರರ ಸಿನಿಮಾಗಳಿಗೆ 70 ಪರ್ಸೆಂಟ್‌ನಿಂದ 40 ಪರ್ಸೆಂಟ್ ವರೆಗೆ ಇದೆ. ಬೇರೆ ರಾಜ್ಯದಲ್ಲಿ 30,25 ಪರ್ಸೆಂಟ್ ಇದೆ, ಆ ರಾಜ್ಯದಲ್ಲಿರತಕ್ಕಂಥ ಭಾಷೆಗೆ ಬಿಟ್ಟು ಬೇರೆ ಭಾಷೆಗಳಿಗೆ. ಅದರಿಂದ 70 ಇರುವುದನ್ನು 40 ಮಾಡಿದ್ದೇವೆ, ಕನ್ನಡಕ್ಕೆ ನೂರಕ್ಕೆ ನೂರು ರಿಯಾಯಿತಿ ಇದೆ, ನಾವು ಹಿಂದೆ ಇದ್ದಾಗಲೇ ನೂರಕ್ಕೆ ನೂರು ರಿಯಾಯಿತಿಯನ್ನು ಮಾಡಿದ್ದೇವೆ, ಆದುದರಿಂದ ಮುಂದೆ ಸಿನಿಮಾ ಇಂಡಸ್ಟ್ರೀಸ್‌ನವರೆಲ್ಲರನ್ನೂ ಕರೆದು ಅದರ ಬಗ್ಗೆ ತೀರ್ಮಾನ ಮಾಡುತ್ತೇವೆ, ಮುಂದೆ ಹೊಸ ಪಾಲಿಸಿ ಮಾಡುತ್ತೇವೆ...

6. ನಿಯಮಗಳಿಗೆ ತಿದ್ದುಪಡಿ

ಅಧ್ಯಕ್ಷರು : ಈಗ ನಿಯಮಗಳಿಗೆ ಕೆಲವು ತಿದ್ದುಪಡಿಗಳು, ಮಾನ್ಯ ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 361ರನ್ವಯ ನೀಡಿರುವ ಪ್ರಸ್ತಾವನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ಇಲಾಖಾ ವಿಷಯ ಸಮಿತಿಗಳಿಗೆ ಸಂಬಂಧಿಸಿದಂತೆ ನಿಯಮ 293 ರಿಂದ 300 ರವರೆಗಿನ ನಿಯಮಗಳನ್ನು 2004–05ನೇ ಸಾಲಿನ ಪರಿಷ್ಕೃತ ಆಯವ್ಯಯಕ್ಕೆ ಸಂಬಂಧಿಸಿದಂತೆ ತಡೆಹಿಡಿಯುವ ಬಗ್ಗೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು